# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ದೂರಶಿಕ್ಷಣ ನಿರ್ದೇಶನಾಲಯ
ವಿದ್ಯಾರಣ್ಯ-583 276

ಸಂಖ್ಯೆ:ಕವಿಹಂ:ದೂಶಿನಿ:17:ಪರೀಕ್ಷೆ:2019:ಸೂಚನೆ:2021-22 ದಿನಾಂಕ 17.01.2022

## ವಿದ್ಯಾರ್ಥಿಗಳ ಪರೀಕ್ಷಾ ಸೂಚನಾ ಪತ್ರ

**2019-20ನೇ ಸಾಲಿನ ಎಂ.ಎ. ಪ್ರಥಮ ವರ್ಷ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗಳನ್ನು ದಿನಾಂಕ:07.02.2022 ರಿಂದ ದಿನಾಂಕ:11.02.2022ರವರೆಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕೇಂದ್ರದಲ್ಲಿ ಹಾಗೂ ವಿಶ್ವವಿದ್ಯಾಲಯ ಅನುಮತಿಸಿದ ಪರೀಕ್ಷಾ ಕೇಂದ್ರಗಳಲ್ಲಿ** ನಡೆಯಲಿವೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಈ ಕೆಳಗಿನ ಪರೀಕ್ಷಾ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

1. ಎಂ.ಎ. ಪ್ರಥಮ ವರ್ಷದ ಕನ್ನಡ, ಚರಿತ್ರೆ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ವಿದ್ಯಾರ್ಥಿಗಳು ಮತ್ತು ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಡಿಪ್ಲೊಮ, ಪತ್ರಿಕೋದ್ಯಮ ಡಿಪ್ಲೊಮ, ನಾಟಕ ಕಲೆ ಡಿಪ್ಲೊಮ ಕೋರ್ಸ್‌ಗಳ ವಾರ್ಷಿಕ ಪರೀಕ್ಷೆಗಳು ದಿನಾಂಕ 07.02.2022 ರಿಂದ 11.02.2022ರವರೆಗೆ ಬೆಳಿಗ್ಗೆ 10.30 ರಿಂದ 1.30ರ ವರೆಗೆ ನಡೆಯುತ್ತವೆ.
2. ದಿನಾಂಕ:31.01.2022ರೊಳಗೆ ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.
3. ಪರೀಕ್ಷಾ ಕೇಂದ್ರ ಬದಲಾವಣೆ ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ರೂ.1500 ಶುಲ್ಕವನ್ನು ಪಾವತಿಸಿ, ದಿನಾಂಕ:31.01.2022ರೊಳಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
4. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಕೇಂದ್ರದಲ್ಲಿ ನೋಂದಣಿ ಪಡೆದಿರುವ ವಿದ್ಯಾರ್ಥಿಗಳು ಪ್ರವೇಶಪತ್ರಗಳನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದು.
5. ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಆಯಾ ಅಧ್ಯಯನ ಕೇಂದ್ರಗಳಲ್ಲಿ ಒಂದು ದಿನ ಮುಂಚಿತವಾಗಿ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳಬಹುದು.
6. ಪ್ರವೇಶ ಪತ್ರಗಳನ್ನು ಪಡೆಯುವಾಗ ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ತರುವುದು ಕಡ್ಡಾಯ.
7. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷೆಗಳು ಮುಗಿಯುವವರೆಗೆ ಪ್ರವೇಶ ಪತ್ರದ ಜೊತೆಗೆ ಗುರುತಿನ ಚೀಟಿಯನ್ನು ಇಟ್ಟುಕೊಳ್ಳುವುದು ಮತ್ತು ಪರಿಶೀಲಕರು ಪರಿಶೀಲನೆಗೆ ಬಂದಾಗ ಪ್ರವೇಶ ಪತ್ರದ ಜೊತೆಗೆ ಗುರುತಿನ ಚೀಟಿಯನ್ನು ತೋರಿಸಬೇಕು.
8. ಯಾವುದೇ ಪುಸ್ತಕ ಅಥವಾ ಅದರ ಪುಟಗಳನ್ನು, ನೋಟ್‌ಬುಕ್ಕನ್ನು, ಕಚ್ಚಾ ಅಥವಾ ಕೈಬರಹದ ಹಾಳೆಗಳನ್ನು, ಇತರ ನಿರ್ಬಂಧಿತ ಸಾಮಗ್ರಿಗಳನ್ನು ಪರೀಕ್ಷಾ ಕೊಠಡಿಯಲ್ಲಿ ತರುವುದು ನಿಷಿದ್ಧ. ಅಂಥ ಯಾವುದೇ ವಸ್ತುಗಳನ್ನು ಪರೀಕ್ಷಾ ಸಮಯದಲ್ಲಿ ಇಟ್ಟುಕೊಳ್ಳಬಾರದು.
9. ಬರವಣಿಗೆಯ ಯಾವುದೇ ಸಾಮಗ್ರಿಗಳನ್ನು ಪರಸ್ಪರ ವರ್ಗಾಯಿಸಿಕೊಳ್ಳಬಾರದು.
10. ಪರೀಕ್ಷಾ ವೇಳೆಯಲ್ಲಿ ಬೇರೆ ಪರೀಕ್ಷಾರ್ಥಿಯೊಂದಿಗೆ ಮಾತನಾಡುವುದು ಅಥವಾ ಬೇರಾವುದೇ ವಿಧದಲ್ಲಿ ಸಂಪರ್ಕಿಸಬಾರದು.
11. ಬರೆದ ಅಥವಾ ಖಾಲಿ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೊಠಡಿಯಿಂದ ಹೊರಡುವಾಗ ಪರೀಕ್ಷಾರ್ಥಿಯು ಜೊತೆಗೆ ತೆಗೆದುಕೊಂಡು ಹೋಗಬಾರದು. ಬರೆದ ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಒಪ್ಪಿಸುವುದು ವಿದ್ಯಾರ್ಥಿಯ ಕರ್ತವ್ಯವಾಗಿರುತ್ತದೆ.
12. ಬೇರೆಯವರಿಂದ ಸಹಾಯ ಪಡೆಯುವುದು, ಸಹಾಯ ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದು. ಪುಸ್ತಕ, ಹಸ್ತಪ್ರತಿ, ಟಿಪ್ಪಣಿ ಇತ್ಯಾದಿಗಳ ಮೂಲಕ ನಕಲು ಮಾಡಬಾರದು ಅಥವಾ ನಕಲು ಮಾಡಲು ಪ್ರಯತ್ನಿಸಬಾರದು, ಬೇರೆಯವರಿಗೆ ತಮ್ಮ ಉತ್ತರ ಪತ್ರಿಕೆಯನ್ನು ನಕಲು ಮಾಡಲು ಅವಕಾಶ ಕೊಡಬಾರದು.
13. ಪರೀಕ್ಷೆಯಲ್ಲಿ ಯಾವುದೇ ಪರೀಕ್ಷಾರ್ಥಿಗೆ ಅನುಕೂಲವಾಗಬಹುದಾದ ಸಂಜ್ಞೆ, ಸೂಚನೆಗಳನ್ನು ಕಾಗದದ ಮೇಲೆ ಇಲ್ಲವೇ ಇನ್ನಿತರ ಯಾವುದೇ ವಸ್ತುಗಳ ಮೇಲೆ ಬರೆಯಬಾರದು.
14. ಹೊರಗೆ ಬರೆದು ಸಿದ್ಧಪಡಿಸಿದ ಉತ್ತರ ಪತ್ರಿಕೆಯನ್ನು ಕಳ್ಳತನದಿಂದ ಪರೀಕ್ಷಾ ಕೊಠಡಿಯಲ್ಲಿ ಸಾಗಿಸುವಂಥ ಹಾಗೂ ಪರೀಕ್ಷಾ ಕೋಣೆಯಲ್ಲಿ ಒದಗಿಸದಿದ್ದ ಕಾಗದಗಳನ್ನಾಗಲೀ, ಬದಲಿ ಉತ್ತರ ಪತ್ರಿಕೆಗಳನ್ನಾಗಲೀ ಮೂಲ ಉತ್ತರ ಪತ್ರಿಕೆಯೊಂದಿಗೆ ಲಗತ್ತಿಸುವಂಥ ಅಥವಾ ಲಗತ್ತಿಸಲು ಪ್ರಯತ್ನಿಸುವಂಥ ಅಸಮಂಜಸ ಮಾರ್ಗ ಅನುಸರಿಸಬಾರದು. ಇದು ಕಾನೂನು ರೀತ್ಯಾ ಅಪರಾಧವಾಗಿರುತ್ತದೆ.
15. ತನ್ನ ಹೆಸರಿನಲ್ಲಿ ಬೇರೆಯವರನ್ನು ಪರೀಕ್ಷೆಗೆ ಕೂಡಿಸುವುದು ಅಥವಾ ತಾನು ಬೇರೆಯವರ ಹೆಸರಿನಲ್ಲಿ ಪರೀಕ್ಷೆ ಬರೆಯುವುದು ಕಾನೂನು ರೀತ್ಯಾ ಅಪರಾಧವಾಗುತ್ತದೆ.

16. ಪರೀಕ್ಷಾ ಕೊಠಡಿಯಲ್ಲಿಯ ಮೇಲ್ವಿಚಾರಕರನ್ನು, ಪರೀಕ್ಷಾ ಸಿಬ್ಬಂದಿಯವರನ್ನು, ನಾಲ್ಕನೇ ದರ್ಜೆ ನೌಕರರನ್ನು ಅಥವಾ ವಿಶ್ವವಿದ್ಯಾಲಯದ ಮತ್ತು ಕಾಲೇಜುಗಳ ಅಧಿಕಾರಿ ವರ್ಗದವರನ್ನು ಪರೀಕ್ಷೆಯಲ್ಲಿ ಅಕ್ರಮ ಸೌಲಭ್ಯಕ್ಕಾಗಿ ವಿನಂತಿಸಬಾರದು, ಮನವಿ ಮಾಡಬಾರದು, ಬೆದರಿಕೆ ಹಾಕುವುದು ಅಥವಾ ಆಸೆ ತೋರಿಸಬಾರದು.

17. ವಿದ್ಯಾರ್ಥಿಯು ಈ ಮೇಲಿನ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಇದನ್ನು ಅಪರಾಧವೆಂದು ಪರಿಗಣಿಸಲಾಗುವುದು.

18. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಮಾಸ್ಕನ್ನು ಧರಿಸತಕ್ಕದ್ದು.

19. ಪರೀಕ್ಷಾ ಕೊಠಡಿಯಲ್ಲಿ ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು.

20. ಯಾವುದೇ ಕಾನೂನು ವಿವಾದಗಳು ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದ ನ್ಯಾಯಾಲಯದ ವ್ಯಾಪ್ತಿಗೆ ಮಾತ್ರ ಒಳಪಡುತ್ತವೆ.

21. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ತಮ್ಮ ಊಟ ಮತ್ತು ವಸತಿಯನ್ನು ತಾವೇ ವ್ಯವಸ್ಥೆ ಮಾಡಿಕೊಳ್ಳಬೇಕು.

22. ಪರೀಕ್ಷೆ ನಡೆಯುವ ದಿನಗಳು ಮತ್ತು ಕೋರ್ಸ್‌ಗಳ ವಿವರಗಳು

| ದಿನಾಂಕ | ಸಮಯ | ಕೋರ್ಸ್‌ಗಳು |
|---|---|---|
| 07.02.2022 ರಿಂದ 11.02.2022 | 10.30 ರಿಂದ 1.30 ವರೆಗೆ | ಕನ್ನಡ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು<br>ಚರಿತ್ರೆ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು<br>ಸಮಾಜಶಾಸ್ತ್ರ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳು<br>ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ (ಎಂ.ಜೆ.ಎಂ.ಸಿ.) ಪ್ರಥಮ ವರ್ಷದ ವಿದ್ಯಾರ್ಥಿಗಳು<br><br>ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮ ಕೋರ್ಸ್‌ನ ವಿದ್ಯಾರ್ಥಿಗಳು<br>ನಾಟಕ ಕಲೆ ಡಿಪ್ಲೊಮ ಕೋರ್ಸ್‌ನ ವಿದ್ಯಾರ್ಥಿಗಳು<br>ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಡಿಪ್ಲೊಮ ಕೋರ್ಸ್‌ನ ವಿದ್ಯಾರ್ಥಿಗಳು |

23. ದೂರಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕೇಂದ್ರಗಳ ವಿವರಗಳು ಕೆಳಗಿನಂತಿವೆ.

| ಕ್ರಸಂ | ಅಧ್ಯಯನ ಕೇಂದ್ರದ ಹೆಸರು |
|---|---|
| 1 | ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ 583 276 (ಕೇಂದ್ರ ಕಛೇರಿ) |
| 2 | ಮೈಸೂರು ಶಿಕ್ಷಣ ಸಂಸ್ಥೆಯ ರಂಗಶಾಲೆ ಬ್ರಾಹ್ಮೀ ಕಿಶೋರ ಕೇಂದ್ರ, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ **ಬೆಂಗಳೂರು 560 003** |
| 3 | ಮಾಲತೇಶ ಶಿಕ್ಷಣ ಸಂಸ್ಥೆ (ರಿ), ಎಂ.ಇ.ಎಸ್. ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್ ಆಂಜನೇಯ ಬಡಾವಣೆ, ಎಂ.ಸಿ.ಸಿ. 'ಬಿ' ಬ್ಲಾಕ್ **ದಾವಣಗೆರೆ 577 004** |
| 4 | ವೀರಶೈವ ವಿದ್ಯಾವರ್ಧಕ ಸಂಘದ ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಕಾಲೇಜು **ಹೂವಿನ ಹಡಗಲಿ 583 219** |
| 5 | ರೇಶ್ಮಿ ಎಜುಕೇಶನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ ರೇಶ್ಮಿ ವಿದ್ಯಾಭವನ, ಸರಸ್ವತಿಪುರ, ಕುಸನೂರು ರಸ್ತೆ, ಕಲಬುರಗಿ ವಿಶ್ವವಿದ್ಯಾಲಯದ ಹಿಂದುಗಡೆ, **ಕಲಬುರಗಿ–585 106** |
| 6 | ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, **ಹಾರೂಗೇರಿ–591 220** |
| 7 | ಗ್ರಾಮಾಂತರ ವಿದ್ಯಾವರ್ಧಕ ಸಂಘದ ಶ್ರೀ ಶಾಂತವೀರ ಕಲಾ ಮಹಾವಿದ್ಯಾಲಯ, **ಬಬಲೇಶ್ವರ 586 116** ವಿಜಯಪುರ ಜಿಲ್ಲೆ |

24. ವಿದ್ಯಾರ್ಥಿಯು ಹೆಚ್ಚಿನ ಮಾಹಿತಿಗಳನ್ನು ಅಧ್ಯಯನ ಕೇಂದ್ರಗಳು ಅಥವಾ ದೂರಶಿಕ್ಷಣ ನಿರ್ದೇಶನಾಲಯದ ಮೊ.8792219968, ವಿಶ್ವವಿದ್ಯಾಲಯದ ವೆಬ್‌ಸೈಟ್ www.kannadauniversity.orgನ್ನು ಸಂಪರ್ಕಿಸಬಹುದು.

31/1/22

ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ

ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬